


## ಯುದ್ಧ: ಕೊನೆಯಿರದ ದಾಹ

ಕಳೆದ ಎರಡು ಮೂರು ವರ್ಷಗಳಲ್ಲಿ ಇಡೀ ಜಗತ್ತು ಒಂದಲ್ಲಾ ಒಂದು ಬಗೆಯಲ್ಲಿ ಯುದ್ಧದ ಕಾವನ್ನು ಅನುಭವಿಸಿವೆ. ರಷ್ಯಾ ಮತ್ತು ಉಕ್ರೇನ್‌ಗಳ ನಡುವಣ ಯುದ್ಧದ ಕಣ್ಣಾಮುಚ್ಚಾಲೆ ಮುಂದುವರಿದಿರುವಾಗಲೇ, ಇಸ್ರೇಲ್ ಮತ್ತು ಹಮಾಸ್ ಭಯೋತ್ಪಾದಕರ ನಡುವಣ ಯುದ್ಧ 2023ರಲ್ಲಿ ತೀವ್ರಗೊಂಡಿತ್ತು. ಸಾವಿರಾರು ಉಗ್ರರನ್ನು ಕೊಂದಿರುವ ಹಮಾಸ್ ಉಗ್ರರನ್ನು ಹತ್ತಿಕ್ಕಲು ಇಸ್ರೇಲ್ ಹೋರಾಟ ಮುಂದುವರೆಸಿದೆ. ಪ್ಯಾಲಸ್ತೀನಿನಲ್ಲಿ ನೆಲೆ ಮಾಡಿಕೊಂಡಿದ್ದಾರೆ ಎನ್ನಲಾದ ಹಮಾಸ್ ಉಗ್ರರ ವಿರುದ್ಧ ಇಸ್ರೇಲ್ ಮುಗಿಬಿದ್ದಿದ್ದು, ಈ ಸಂಘರ್ಷದಲ್ಲಿ ಅಪಾರ ಸಾವುನೋವು ಸಂಭವಿಸಿದೆ. ಯುದ್ಧದಲ್ಲಿ 18 ವರ್ಷದೊಳಗಿನ 3760 ಪ್ಯಾಲಸ್ತೀನ್ ಮಕ್ಕಳು ಮೊದಲ ಮೂರು ವಾರಗಳ ಸಂಘರ್ಷದಲ್ಲಿ ಮೃತಪಟ್ಟಿದ್ದಾರೆ ಎಂದು ಗಾಜಾ ಪಟ್ಟಿಯ ಆರೋಗ್ಯ ಸಚಿವಾಲಯ ಹೇಳಿದೆ. ಸಾವಿಗೀಡಾದ ನತದೃಷ್ಟ ಮಕ್ಕಳಲ್ಲಿ ಹಸುಗೂಸುಗಳು ಹಾಗೂ ಅಂಬೆಗಾಲಿನ ಕಂದಮ್ಮಗಳೂ ಸೇರಿವೆ. ಗಾಜಾ ಪಟ್ಟಿಯು ಮಕ್ಕಳ ಪಾಲಿಗೆ ಸ್ಮಶಾನವಾಗಿದೆ, ಪೋಷಕರ ಪಾಲಿನ ಶಾಪವಾಗಿದೆ.

2013ರಿಂದ 2017ರ ಅವಧಿಯಲ್ಲಿ, ವಿಶ್ವದ 10 ಸಂಘರ್ಷ ವಲಯಗಳಲ್ಲಿ ಕನಿಷ್ಠ 5.5 ಲಕ್ಷ ಶಿಶುಗಳು ಸಾವನ್ನಪ್ಪಿವೆ ಎಂದು 'ಸೇವ್ ದಿ ಚಿಲ್ಡ್ರನ್' ಸಂಸ್ಥೆ ಅಂದಾಜು ಮಾಡಿದೆ. ಐದು ವರ್ಷದೊಳಗಿನ ಮಕ್ಕಳನ್ನೂ ಸೇರಿಸಿಕೊಂಡರೆ ಸಾವಿಗೀಡಾದ ಎಳೆಯರ ಸಂಖ್ಯೆ 8.7 ಲಕ್ಷಕ್ಕೂ ಹೆಚ್ಚಾಗಿದೆ. ಯುನಿಸೆಫ್ ಅಂದಾಜಿನ ಪ್ರಕಾರ, 2005ರಿಂದ 2022ರ ಅವಧಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಸಶಸ್ತ್ರ ಪಡೆಗಳು ಅಥವಾ ಉಗ್ರರ ಗುಂಪುಗಳು ತಮ್ಮ ದುಷ್ಕೃತ್ಯಗಳಿಗೆ ಬಳಸಿಕೊಂಡಿವೆ; ಮಕ್ಕಳ ಹಕ್ಕುಗಳ ಗಂಭೀರ ಉಲ್ಲಂಘನೆ ಪ್ರತಿದಿನವೂ ನಡೆಯುತ್ತಿದೆ.




ವರ್ಷದ ಕೊನೆಯಲ್ಲಿ, ರಷ್ಯಾದ ಸೇನೆಗಳು ಉಕ್ರೇನ್‌ನ ಪಟ್ಟಣಗಳಿಗೆ ನುಗ್ಗಿ ತೀವ್ರ ದಾಳಿ ನಡೆಸುತ್ತಿರುವ ವರದಿಗಳು ಬರುತ್ತಿವೆ.

## ವೈದ್ಯೆಯ ಅತ್ಯಾಚಾರ–ಕೊಲೆಗೆ ಕಣ್ಣೀರು

ಕೋಲ್ಕತ್ತದ 'ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ'ಯಲ್ಲಿ ಆಗಸ್ಟ್ 9ರಂದು ವೈದ್ಯ ವಿದ್ಯಾರ್ಥಿನಿಯೊಬ್ಬರು ಅತ್ಯಾಚಾರ–ಕೊಲೆಗೀಡಾದ ಪ್ರಕರಣ ದೇಶದ ಗಮನಸೆಳೆದಿದೆ.

'ಸ್ಥಳೀಯ ಪೊಲೀಸರಿಗೆ ಸ್ವಯಂಸೇವಕನಂತೆ ಕೆಲಸ ಮಾಡುತ್ತಿದ್ದ ಸಂಜಯ್ ರಾಯ್ ಎನ್ನುವ ವ್ಯಕ್ತಿ ಕೊಲೆ ಪ್ರಕರಣದ ಪ್ರಮುಖ ಆರೋಪಿ' ಎಂದು ಕೋಲ್ಕತ್ತದ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಸಿಬಿಐ ಉಲ್ಲೇಖಿಸಿದೆ.

ವಿರಾಮದ ಅವಧಿಯಲ್ಲಿ ಸಂತ್ರಸ್ತೆಯು ಆಸ್ಪತ್ರೆಯ ಸೆಮಿನಾರ್ ಕೊಠಡಿಯಲ್ಲಿ ನಿದ್ದೆ ಮಾಡುತ್ತಿದ್ದ ಸಮಯದಲ್ಲಿ ಆರೋಪಿ ಅತ್ಯಾಚಾರವೆಸಗಿ ಕೊಲೆಗೈದಿದ್ದಾನೆ ಎನ್ನಲಾಗಿದೆ. ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಪೊಲೀಸರ ವಿಳಂಬ ನೀತಿಯನ್ನು ಪ್ರತಿಭಟಿಸಿ ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆದವು. ರಾಜ್ಯ ಸರ್ಕಾರದ ನಿರ್ಲಕ್ಷ್ಯವನ್ನು ವಿರೋಧಿಸಿ ವೈದ್ಯರು ನಡೆಸಿದ ಮುಷ್ಕರದ ಬಿಸಿ ಸುಪ್ರೀಂ ಕೋರ್ಟ್‌ಗೂ ತಟ್ಟಿತು.